ಕರ್ನಾಟಕ ಸರ್ಕಾರ
# ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

ಹಿಂಬರಹ ಸಂಖ್ಯೆ: DOF-TECH0ALL2/81/2021, E-502845. ದಿನಾಂಕ:29/06/2021

ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆರವರ ಪತ್ರ ಸಂಖ್ಯೆ: ಪಸಂಮೀ/ಇ-62/ಮೀಇಇ/2021, ದಿನಾಂಕ: 29/06/2021ರ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಿ, ಕಳುಹಿಸುತ್ತಾ, ದಿನಾಂಕ:30/06/2021ಕ್ಕೆ ಮುಕ್ತಾಯವಾಗುವ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಅಂತಿಮ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇ 5 ರಷ್ಟು ಹೆಚ್ಚುವರಿಯಾಗಿ ಗುತ್ತಿಗೆ ಮೊತ್ತವನ್ನು ಪಾವತಿಸಿಕೊಂಡು 01 ವರ್ಷದ ಅವಧಿಗೆ (ದಿನಾಂಕ:01/07/2021 ರಿಂದ ದಿನಾಂಕ:30/06/2022ರವರೆಗೆ) ಮೀನು ಪಾಶುವಾರು ಹಕ್ಕನ್ನು ಮುಂದುವರೆಸಲು ತಿಳಿಸಿದೆ.

Ramachandra
ಮೀನುಗಾರಿಕೆ ನಿರ್ದೇಶಕರು
29/06/21

ಗೆ:

ಎಲ್ಲಾ ಮೀನುಗಾರಿಕೆ ಹಿರಿಯ ಉಪ ನಿರ್ದೇಶಕರುಗಳು,

ಎಲ್ಲಾ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ,

ಎಲ್ಲಾ ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ,

ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ(1) ಸಂಕಲನಕ್ಕೆ ಮಾಹಿತಿಗಾಗಿ.

ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ (2) ದಾಸ್ತಾನು ಕಡತಕ್ಕೆ.

# ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ ಇ-62 ಮೀಇಇ 2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ: 29-06-2021

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ವಿಕಾಸಸೌಧ,
**ಬೆಂಗಳೂರು.**

**"ಅತೀ ಜರೂರು"**

ಇವರಿಗೆ,
ಮೀನುಗಾರಿಕೆ ನಿರ್ದೇಶಕರು
**ಬೆಂಗಳೂರು.**

ಮಾನ್ಯರೇ,

ವಿಷಯ:- ಕೋವಿಡ್ ಸಾಂಕ್ರಾಮಿಕ ರೋಗ ನಿಮಿತ್ತ ದಿನಾಂಕ: 30-06-2021ಕ್ಕೆ ಅವಧಿ ಮುಕ್ತಾಯವಾಗುವ ಕೆರೆ / ಜಲಾಶಯ / ನದಿ ಭಾಗಗಳ ಗುತ್ತಿಗೆ / ಬಿಡ್ ಮೊತ್ತ ಪಾವತಿಸಿಕೊಂಡು 2021-22ನೇ ಸಾಲಿಗೆ ಗುತ್ತಿಗೆ ಅವಧಿ ವಿಸ್ತರಿಸುವ ಕುರಿತು.

ಉಲ್ಲೇಖ:- ಪತ್ರ ಸಂಖ್ಯೆ: DoF-TECHOALL2/81/2021, ದಿನಾಂಕ: 09-06-2021.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ಕಡೆಗೆ ತಮ್ಮ ಗಮನವನ್ನು ಸೆಳೆಯುತ್ತಾ, ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಲಾಕ್ ಡೌನ್ ಅವಧಿಯಲ್ಲಿ ಮೀನುಗಳನ್ನು ಹಿಡುವಳಿ ಮಾಡಲು ಸಾಧ್ಯವಾಗದೇ ಇರುವುದರಿಂದ, ದಿನಾಂಕ: 30-06-2021ಕ್ಕೆ ಅವಧಿ ಮುಕ್ತಾಯವಾಗುವ ಕೆರೆ / ಜಲಾಶಯ / ನದಿ ಭಾಗಗಳ ಗುತ್ತಿಗೆ / ಬಿಡ್ ಮೊತ್ತ ಪಾವತಿಸಿಕೊಂಡು 2021-22ನೇ ಸಾಲಿಗೆ ಗುತ್ತಿಗೆ ಅವಧಿ ವಿಸ್ತರಿಸುವುದು ಸೂಕ್ತವೆಂದು ಉಲ್ಲೇಖಿತ ಪತ್ರದಲ್ಲಿ ಅಭಿಪ್ರಾಯಿಸಲಾಗಿದೆ.

ಆದ್ದರಿಂದ, ಕೋವಿಡ್-19 ಕಾರಣದಿಂದಾಗಿ ಲಾಕ್ ಡೌನ್ ವಿಧಿಸಿದ್ದರಿಂದ ಮೀನು ಹಿಡಿದು ವಿಲೇವಾರಿ ಮಾಡಲು ಗುತ್ತಿಗೆದಾರರಿಗೆ ಸಾಧ್ಯವಾಗಿರುವುದಿಲ್ಲ ಎನ್ನುವುದನ್ನು ಮನಗಂಡು ದಿನಾಂಕ: 30-06-2021ಕ್ಕೆ ಮುಕ್ತಾಯವಾಗುತ್ತಿರುವ ಕೆರೆ / ಜಲಾಶಯ / ನದಿಭಾಗಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರು ಅಂತಿಮ ವರ್ಷಕ್ಕೆ ಪಾವತಿಸಿರುವ ಗುತ್ತಿಗೆ ಮೊತ್ತಕ್ಕೆ ನಿಯಮಾನುಸಾರ ಶೇ.5ರಷ್ಟನ್ನು ಹೆಚ್ಚಿಸಿ, ಗುತ್ತಿಗೆ ಮೊತ್ತವನ್ನು ಪಾವತಿಸಿಕೊಳ್ಳುವ

ಪರತ್ತಿಗೊಳಪಟ್ಟು, ಒಂದು ವರ್ಷದ ಅವಧಿಗೆ ಅಂದರೆ 2021-22ನೇ ಸಾಲಿಗೆ ಮುಂದುವರೆಸಲು ಸರ್ಕಾರದ ಅನುಮತಿ ನೀಡಲಾಗಿದೆ ಎಂದು ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು
ಜಲಸಾರಿಗೆ ಸಚಿವರಿಂದ ಅನುಮೋದಿಸಲ್ಪಟ್ಟಿದೆ)

ತಮ್ಮ ನಂಬುಗೆಯ

Kamakshi U.A 29/6/21
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

TCK 29.6.2021.